ಆಗಸ್ಟ್ 2026



ದಿ. ಶ್ರೀ ಅನಂತಕುಮಾರ
ಸಂಸ್ಥಾಪಕರು, ಅದಮ್ಯಚೇತನ,
ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು

# ಅನಂತ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ


## ಬಾಹ್ಯಾಕಾಶಕ್ಕೆ ಖಾಸಗಿ ರಾಕೆಟ್ ಬಾಹ್ಯಾಕಾಶದಲ್ಲಿ 'ವಿಕ್ರಮ್'ನ ಹೊಸ ವಿಕ್ರಮ!

ನಮ್ಮ ಬಾಹ್ಯಾಕಾಶ ಸಂಸ್ಥೆ ಇಸ್ರೋ (ISRO) ಬಗ್ಗೆ ನಿಮಗೆಲ್ಲ ಗೊತ್ತೇ ಇದೆ ತಾನೆ? ರಾಕೆಟ್ ಉಡಾವಣೆ ಎಂದರೆ ಅದು ಇಸ್ರೋದ ಕೆಲಸ ಎಂದೇ ನಾವೆಲ್ಲ ಅಂದುಕೊಂಡಿದ್ದೇವೆ. ಆದರೆ ಈಗ ನಮ್ಮ ದೇಶದ ಖಾಸಗಿ ಕಂಪನಿಗಳೂ ರಾಕೆಟ್ ಹಾರಿಸಲು ಶುರುಮಾಡಿವೆ! ಹೈದರಾಬಾದ್‌ನ 'ಸ್ಕೈರೂಟ್ ಏರೋಸ್ಪೇಸ್' ಎಂಬ ಸಂಸ್ಥೆ 'ವಿಕ್ರಮ್–ಎಸ್' ಎಂಬ ರಾಕೆಟ್ ಅನ್ನು ಯಶಸ್ವಿಯಾಗಿ ಬಾಹ್ಯಾಕಾಶಕ್ಕೆ ಕಳುಹಿಸಿ ಹೊಸ ಇತಿಹಾಸ ಸೃಷ್ಟಿಸಿದೆ.

ಭಾರತದ ಬಾಹ್ಯಾಕಾಶ ವಿಜ್ಞಾನದ ಪಿತಾಮಹ ಡಾ. ವಿಕ್ರಮ್ ಸಾರಾಭಾಯ್ ಅವರ ನೆನಪಿನಲ್ಲಿ ಈ ರಾಕೆಟ್‌ಗೆ 'ವಿಕ್ರಮ್' ಎಂದು ಹೆಸರಿಡಲಾಗಿದೆ. ಇನ್ನೊಂದು ವಿಶೇಷವೆಂದರೆ, ಇದೇ ಆಗಸ್ಟ್ 12ರಂದು ಡಾ. ವಿಕ್ರಮ್ ಸಾರಾಭಾಯ್ ಅವರ ಜನ್ಮದಿನ

ಇದು ನಮ್ಮ ದೇಶದ ಮೊದಲ ಖಾಸಗಿ ರಾಕೆಟ್ ಆಗಿದ್ದು, ಇದನ್ನು ಕೇವಲ ಕಾರ್ಬನ್ ಫೈಬರ್‌ನಿಂದ ಬಹಳ ಹಗುರವಾಗಿ ನಿರ್ಮಿಸಲಾಗಿದೆ. ಇದರ ಬಗ್ಗೆ ಇನ್ನೊಂದು ಅಚ್ಚರಿಯ ಸಂಗತಿ ಗೊತ್ತೆ? ಈ ರಾಕೆಟ್‌ನ ಪ್ರಮುಖ ಭಾಗಗಳನ್ನು 'ತ್ರೀಡಿ ಪ್ರಿಂಟಿಂಗ್' (3D Printing) ತಂತ್ರಜ್ಞಾನ ಬಳಸಿ ತಯಾರಿಸಲಾಗಿದೆ! ಅಂದರೆ ನಾವು ಕಂಪ್ಯೂಟರ್‌ನಿಂದ ಕಾಗದದ ಮೇಲೆ ಅಕ್ಷರಗಳನ್ನು ಪ್ರಿಂಟ್ ತೆಗೆಯುವ ಹಾಗೆ, ಈ ರಾಕೆಟ್‌ನ ಎಂಜಿನ್ ಭಾಗಗಳನ್ನು ಒಂದು ವಿಶೇಷ ಯಂತ್ರವೊಂದು ಪ್ರಿಂಟ್ ಮಾಡಿದೆ ಎಂದರೆ ಅಚ್ಚರಿಯಲ್ಲವೇ!

ಒಮ್ಮೆ ಯೋಚಿಸಿ ನೋಡಿ! ಒಂದು ಕಾಲದಲ್ಲಿ ರಾಕೆಟ್ ನಿರ್ಮಿಸುವುದು ಸರ್ಕಾರದ ಸಂಸ್ಥೆಗಳಿಗೆ ಮಾತ್ರ ಸಾಧ್ಯ ಎಂದು ಭಾವಿಸಲಾಗುತ್ತಿತ್ತು. ಆದರೆ ಇಂದು ಭಾರತೀಯ ಯುವ ವಿಜ್ಞಾನಿಗಳು ಮತ್ತು ಇಂಜಿನಿಯರ್‌ಗಳು ತಮ್ಮದೇ ಕಂಪನಿಗಳನ್ನು ಆರಂಭಿಸಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಇತಿಹಾಸ ಬರೆಯುತ್ತಿದ್ದಾರೆ. ವಿಜ್ಞಾನ, ಗಣಿತ ಮತ್ತು ತಂತ್ರಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಂಡರೆ, ನಾಳೆ ಇಂತಹ ರಾಕೆಟ್‌ಗಳನ್ನು ವಿನ್ಯಾಸಗೊಳಿಸುವ ವಿಜ್ಞಾನಿಗಳಲ್ಲಿ ನೀವೂ ಒಬ್ಬರಾಗಬಹುದು!



## 12 ಗಂಟೆ, 25000 ಗಿಡಗಳು – ಶಾಲಾ ಮಕ್ಕಳು ಸಹ ಸಾಥ್!



ಒಂದು ಪ್ರಸಿದ್ಧ ಮಾತಿದೆ – "ಒಂದು ಗಿಡ ನೆಡಲು ಅತ್ಯುತ್ತಮ ಸಮಯ ಇಪ್ಪತ್ತು ವರ್ಷಗಳ ಹಿಂದೆಯೇ ಇತ್ತು. ಆದ್ರೆ ಎರಡನೇ ಅತ್ಯುತ್ತಮ ಸಮಯ ಯಾವುದು ಗೊತ್ತಾ? ಅದು ಇವತ್ತು!" ಅಂದ್ರೆ, ತಡ ಆಗಿದೆ ಅಂತ ಸುಮ್ಮನೆ ಕೂರೋ ಬದಲು, ಈಗಲೇ ಶುರು ಮಾಡೋದೇ ಒಳ್ಳೇದು ಅಂತ ಅರ್ಥ. ಇದನ್ನೇ ನಿಜ ಮಾಡಿ ತೋರಿಸಿದ್ದಾರೆ ಬೆಂಗಳೂರಿನ 'ಅದಮ್ಯ ಚೇತನ' ಸಂಸ್ಥೆ!

**ಒಂದೇ ದಿನದಲ್ಲಿ 25,000 ಸಸಿ:**ಪರಿಸರವನ್ನು ಉಳಿಸಲು 'ಅದಮ್ಯ ಚೇತನ' ಸಂಸ್ಥೆ ಇತ್ತೀಚೆಗೆ ಬೆಂಗಳೂರಿನ ತುರಹಳ್ಳಿ ಅರಣ್ಯದ ಅಂಚಿನಲ್ಲಿ ಒಂದು ದೊಡ್ಡ ಪವಾಡವನ್ನೇ ಮಾಡಿದೆ ಗೊತ್ತೆ? ಜೂನ್ 27ರಂದು ಕೇವಲ 12 ಗಂಟೆಗಳ ಅವಧಿಯಲ್ಲಿ ಬರೋಬ್ಬರಿ 25,000 ಸಸಿಗಳನ್ನು ನೆಟ್ಟು ಹೊಸ ದಾಖಲೆ ಬರೆಯಲಾಗಿದೆ! ಆರು ಸಾವಿರಕ್ಕೂ ಹೆಚ್ಚು ಸ್ವಯಂಸೇವಕರು ಸೇರಿ ಈ ಅಚ್ಚರಿಯ ಕೆಲಸ ಮಾಡಿದ್ದಾರೆ. ಇನ್ನೊಂದು ವಿಶೇಷವೆಂದರೆ, ಗಿಡಗಳಿಗೆ ರಾಸಾಯನಿಕ ಗೊಬ್ಬರ ಹಾಕುವ ಬದಲು ಶಾಲಾ ಮಕ್ಕಳಿಂದ ಸಂಗ್ರಹಿಸಿದ ಬಾಳೆಹಣ್ಣಿನ ಸಿಪ್ಪೆ ಹಾಗೂ ಮೊಟ್ಟೆಯ ಸಿಪ್ಪೆಗಳನ್ನು ನೈಸರ್ಗಿಕ ಗೊಬ್ಬರವಾಗಿ ಬಳಸಲಾಗಿದೆ. ಈ 25,000 ಗಿಡಗಳು ಬೆಳೆದು ಹೆಮ್ಮರವಾದಾಗ ನಮ್ಮ ಬೆಂಗಳೂರು ಎಷ್ಟು ತಂಪಾಗುತ್ತದೆ ಊಹಿಸಿ! 'ಇದೊಂದೇ ದಿನಕ್ಕೆ ಮಾತ್ರ ಸೀಮಿತ ಅಲ್ಲ ಗೊತ್ತೆ – ಪ್ರತಿ ಭಾನುವಾರವೂ 'ಗ್ರೀನ್ ಸಂಡೇ' ಎಂಬ ಹೆಸರಿನಲ್ಲಿ ಗಿಡ ನೆಡುವ ಕೆಲಸವನ್ನು ನಿಯಮಿತವಾಗಿ ಮಾಡಲಾಗುತ್ತದೆ!ಒಬ್ಬರಿಗೆ ಒಂದು ಮರ' ಎನ್ನುವ ಈ ಸುಂದರ ಅಭಿಯಾನ ನಿಜಕ್ಕೂ ನಮಗೆಲ್ಲರಿಗೂ ಸ್ಫೂರ್ತಿದಾಯಕವಾಗಿದೆ.

ನೀವೂ ಪ್ರಯತ್ನಿಸಿ ನೋಡಿ!: ಶಾಲೆಯಲ್ಲಿ ದಿನವೂ ಸಿಗುವ ಬಾಳೆಹಣ್ಣನ್ನು ತಿಂದ ಮೇಲೆ ಉಳಿಯುವ ಸಿಪ್ಪೆಗಳನ್ನು ಎಸೆಯಬೇಡಿ! ಅವುಗಳನ್ನು ಸಂಗ್ರಹಿಸಿ, ಸಣ್ಣ ತುಂಡು ಮಾಡಿ, ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಪುಡಿ ಮಾಡಿ ಇಟ್ಟುಕೊಳ್ಳಿ. ಇದೇ ಗಿಡಗಳಿಗೆ ಬೇಕಾದ ನೈಸರ್ಗಿಕ ಗೊಬ್ಬರ. ಹಾಗೆಯೇ ನೀವು ತಿಂದ ಹಣ್ಣುಗಳ ಬೀಜಗಳನ್ನು, ಅಂದರೆ ಮಾವು, ಸೀಬೆ, ನೇರಳೆ ಬೀಜಗಳನ್ನು ತೊಳೆದು, ನೆರಳಿನಲ್ಲಿ ಆರಿಸಿ, ಆದಷ್ಟು ಬೇಗ ಬಿತ್ತಿ. ಒಂದು ಕುಂಡದಲ್ಲಿ ಮಣ್ಣು ತುಂಬಿ, ಬೀಜಗಳನ್ನು ಬಿತ್ತಿ, ನೀವೇ ತಯಾರಿಸಿದ ಗೊಬ್ಬರ ಹಾಕಿ, ದಿನವೂ ಸ್ವಲ್ಪ ನೀರುಣಿಸಿ ಸಸಿ ಬೆಳೆಸಿ. ಕುಂಡದ ತಳದಲ್ಲಿ ಸಣ್ಣ ರಂಧ್ರವಿರಲಿ. ನೀವು ಬೆಳೆಸಿದ ಸಸಿಗಳನ್ನು ತೆಗೆದುಕೊಂಡು 'ಅದಮ್ಯ ಚೇತನ' ಸಂಸ್ಥೆಯ 'ಗ್ರೀನ್ ಸಂಡೇ' ಕಾರ್ಯಕ್ರಮದಲ್ಲಿ ಭಾಗವಹಿಸಿ. ನೀವೇ ನೆಟ್ಟ ಗಿಡಕ್ಕೊಂದು ಹೆಸರಿಡಿ, ಆಗಾಗ ನೀರು ಹಾಕಿ, ಅದು ಬೆಳೆಯುವುದನ್ನು ನೋಡಿ ಸಂಭ್ರಮಿಸಿ. ನೆನಪಿಡಿ, ಇಂದಿನ ಪುಟ್ಟ ಸಸಿಯೇ ನಾಳಿನ ಹೆಮ್ಮರ!

## ಹಕ್ಕಿಗಳಿಗೆ ಗಡಿ ಇಲ್ಲ!



ಟಿವಿ ಸುದ್ದಿಗಳಲ್ಲಿ ಅಮೆರಿಕ, ಇರಾನ್, ರಷ್ಯಾ ದೇಶಗಳ ನಡುವೆ ಆಗಾಗ ಯುದ್ಧ ನಡೆಯುತ್ತಿರುತ್ತದೆ. ಆಟದ ಮೈದಾನದಲ್ಲಿ ಜಾಗಕ್ಕಾಗಿ ಮಕ್ಕಳು ಜಗಳವಾಡುವಂತೆ, ದೇಶಗಳೂ ಗಡಿಗಾಗಿ, ಪೆಟ್ರೋಲ್‌ನಂತಹ ಸಂಪನ್ಮೂಲಗಳಿಗಾಗಿ ಕಿತ್ತಾಡುತ್ತವೆ. ಆದರೆ ಯುದ್ಧದಿಂದ ಯಾರಿಗೂ ಲಾಭವಿಲ್ಲ. ಊರುಗಳು, ಆಸ್ಪತ್ರೆಗಳು ನಾಶವಾಗುತ್ತವೆ; ನಿಮ್ಮಂತೆಯೇ ಶಾಲೆಗೆ ಹೋಗಬೇಕಾದ ಮುಗ್ಧ ಮಕ್ಕಳು ಕಷ್ಟಪಡುತ್ತಾರೆ. ಜಗಳವಾಡುವವರಿಗಿಂತ ಒಟ್ಟಿಗೆ ಕುಳಿತು ಮಾತನಾಡಿ ಶಾಂತಿ ಕಾಪಾಡುವವರೇ ನಿಜವಾದ ಹೀರೋಗಳು.

ಇದಕ್ಕೆ ಪರಿಹಾರವೂ ಇದೆ. ಜಗತ್ತಿನ ಬಹಳಷ್ಟು ಜಗಳಗಳು ನಡೆಯುವುದೇ ಇಂಧನಕ್ಕಾಗಿ. ಬೇರೆಯವರನ್ನು ಅವಲಂಬಿಸದೆ ನಮ್ಮ ಕಾಲ ಮೇಲೆ ನಾವೇ ನಿಂತರೆ ಜಗಳಕ್ಕೆ ಕಾರಣವೇ ಇರುವುದಿಲ್ಲ. ಇದನ್ನು ಮಾಡಿ ತೋರಿಸಿದ್ದು ನಮ್ಮ ಅದಮ್ಯ ಚೇತನ. 2009ರಿಂದಲೇ ಎಲ್‌ಪಿಜಿ ಗ್ಯಾಸ್ ಬಿಟ್ಟು, ಕೃಷಿ ತ್ಯಾಜ್ಯದ ಬ್ರಿಕೆಟ್, ಬಯೋಗ್ಯಾಸ್, ತೆಂಗಿನ ಚಿಪ್ಪಿನ ಹೊಗೆರಹಿತ ಒಲೆ ಹಾಗೂ ಸೌರಶಕ್ತಿಯಿಂದ ಸಾವಿರಾರು ಮಕ್ಕಳಿಗೆ ಬಿಸಿಯೂಟ ತಯಾರಿಸುತ್ತಿದೆ. ಸ್ವಾವಲಂಬನೆಯೇ ದೇಶದ ನಿಜವಾದ ಬಲ.

ಒಂದು ಸ್ವಾರಸ್ಯ ಗೊತ್ತೆ? ನಾವು ಎಳೆದ ಗಡಿರೇಖೆಗಳು ಹಕ್ಕಿಗಳಿಗಿಲ್ಲ! 'ಆರ್ಕ್ಟಿಕ್ ಟರ್ನ್' ಎಂಬ ಪುಟ್ಟ ಹಕ್ಕಿ ಉತ್ತರ ಧ್ರುವದಿಂದ ದಕ್ಷಿಣ ಧ್ರುವಕ್ಕೆ ಹಾರುತ್ತಾ ಇಡೀ ಭೂಮಿಯನ್ನೇ ತನ್ನ ಮನೆ ಎಂದುಕೊಳ್ಳುತ್ತದೆ. ನಾವೂ ಜಗತ್ತನ್ನೇ ಒಂದು ಕುಟುಂಬ (ವಸುಧೈವ ಕುಟುಂಬಕಂ) ಎಂದು ಭಾವಿಸಿದರೆ ಯುದ್ಧಗಳೇ ಇರುವುದಿಲ್ಲ ಅಲ್ಲವೇ!

## ವರಮಹಾಲಕ್ಷ್ಮಿ ಹಬ್ಬ ಕಲಶದ ಹಿಂದಿನ ಕಥೆ ಮತ್ತು ಸಂಪ್ರದಾಯ

ಶ್ರಾವಣ ಮಾಸ ಬಂತೆಂದರೆ ನಮ್ಮ ಮನೆಗಳಲ್ಲಿ ಹಬ್ಬಗಳ ಸಂಭ್ರಮ ಶುರುವಾಗುತ್ತದೆ. ಅದರಲ್ಲಿ ಬಹಳ ವಿಶೇಷವಾದ ಹಬ್ಬವೇ 'ವರಮಹಾಲಕ್ಷ್ಮಿ ವ್ರತ'. ಈ ಹಬ್ಬದಲ್ಲಿ ಅಮ್ಮ ಮನೆಯಲ್ಲಿ ಒಂದು ಸುಂದರವಾದ ಕಳಶವನ್ನು ಇಟ್ಟು, ಅದಕ್ಕೆ ಸೀರೆ ಉಡಿಸಿ, ಒಡವೆಗಳನ್ನು ಹಾಕಿ ಸಾಕ್ಷಾತ್ ದೇವಿಯಂತೆ ಅಲಂಕಾರ ಮಾಡುವುದನ್ನು ನೀವು ನೋಡಿರುತ್ತೀರಿ ತಾನೆ?
ಕಲಶ ಯಾಕೆ ಇಷ್ಟು ಮುಖ್ಯ? ಈ ಹಬ್ಬದ ಪ್ರಮುಖ ಆಕರ್ಷಣೆ ಎಂದರೆ ಅಲಂಕಾರಗೊಂಡ ಕಲಶ. ತಾಮ್ರ ಅಥವಾ ಬೆಳ್ಳಿಯ ಪಾತ್ರೆಗೆ ನೀರು ತುಂಬಿಸಿ, ಮಾವಿನ ಎಲೆ ಇಟ್ಟು, ಅದರ ಮೇಲೆ ತೆಂಗಿನಕಾಯಿ ಇಡುತ್ತಾರೆ. ಇದಕ್ಕೆ ಸೀರೆ ಉಡಿಸಿ, ಮುಖ ಬರೆದು ದೇವಿಯ ರೂಪ ಕೊಡುತ್ತಾರೆ. ಯಾಕೆ ಗೊತ್ತೆ ಈ ಕಲಶವನ್ನೇ ಪೂಜಿಸೋದು?



ಪೂಜೆ ಮಾಡುವಾಗ ನಮ್ಮ ಹಿರಿಯರು ಒಂದು ಸುಂದರವಾದ ಶ್ಲೋಕವನ್ನು ಹೇಳುತ್ತಾರೆ: ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ । ಮೂಲೇ ತತ್ರ ಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾಃ ॥

ಇದರ ಅರ್ಥ ಏನು ಗೊತ್ತೆ? ಕಲಶದ ಮುಖಭಾಗದಲ್ಲಿ ಸಾಕ್ಷಾತ್ ವಿಷ್ಣು, ಕುತ್ತಿಗೆಯ ಭಾಗದಲ್ಲಿ ಶಿವ, ತಳಭಾಗದಲ್ಲಿ ಬ್ರಹ್ಮ ಮತ್ತು ಮಧ್ಯದಲ್ಲಿ ಮಾತೃ ದೇವತೆಗಳು ನೆಲೆಸಿದ್ದಾರೆ ಎಂದರ್ಥ. ಅಂದರೆ, ಆ ಒಂದು ಪುಟ್ಟ ಕಳಶದಲ್ಲಿ ಇಡೀ ಬ್ರಹ್ಮಾಂಡವೇ ಅಡಗಿದೆ! ಜೊತೆಗೆ, ಹಿಂದಿನ ಕಾಲದಲ್ಲಿ ನೀರೇ ಜೀವನದ ಮೂಲ ಸಂಪತ್ತು ಎಂದು ನಂಬಿದ್ದರು. ನೀರು ತುಂಬಿದ ಪಾತ್ರೆ ಸಮೃದ್ಧಿ ಮತ್ತು ಫಲವತ್ತತೆಯ ಸಂಕೇತ. ಇಷ್ಟೆಲ್ಲಾ ವಿಶೇಷತೆ ಇರುವುದರಿಂದಲೇ, ಅಂದು ವರಮಹಾಲಕ್ಷ್ಮಿ ದೇವಿಯನ್ನು ಕಳಶದ ರೂಪದಲ್ಲಿ ಶ್ರದ್ಧೆಯಿಂದ ಪೂಜಿಸುವ ಪದ್ಧತಿ ಬೆಳೆದುಬಂತು.



## ಸೊಳ್ಳೆಗಳ ವಿರುದ್ಧ ಜಾಗೃತಿ, ಆಗಸ್ಟ್ 20 ವಿಶ್ವ ಸೊಳ್ಳೆ ದಿನ

ಚಿಕ್ಕದಾದ ಸೊಳ್ಳೆಗೆ ಒಂದು ಇಡೀ ದಿನವನ್ನೇ ಮೀಸಲಿಟ್ಟಿದ್ದಾರೆ ಗೊತ್ತೆ? ಆಗಸ್ಟ್ 20 ಅನ್ನು 'ವಿಶ್ವ ಸೊಳ್ಳೆ ದಿನ' ಎಂದು ಆಚರಿಸಲಾಗುತ್ತದೆ. 1897ರ ದಿನ, ವೈದ್ಯ ವಿಜ್ಞಾನಿ ಸರ್ ರೊನಾಲ್ಡ್ ರಾಸ್ (Sir Ronald Ross) ಅವರು ಮಲೇರಿಯಾ ರೋಗವು ಸೊಳ್ಳೆಗಳ ಮೂಲಕ ಹರಡುತ್ತದೆ ಎಂಬ ಮಹತ್ವದ ಸಂಶೋಧನೆಯನ್ನು ಸಾಬೀತುಪಡಿಸಿದ್ದರು. ಆ ಐತಿಹಾಸಿಕ ದಿನದ ನೆನಪಿಗಾಗಿ ಇದನ್ನು ಆಚರಿಸಲಾಗುತ್ತದೆ. ನಿಮಗೆ ಅಚ್ಚರಿಯಾಗಬಹುದು, ಜಗತ್ತಿನಲ್ಲಿ ಅತಿ ಹೆಚ್ಚು ಜನರನ್ನು ಕೊಲ್ಲುವ ಪ್ರಾಣಿ ಇದೇ ಪುಟ್ಟ ಸೊಳ್ಳೆಯಾಗಿದೆ – ಹುಲಿ, ಹಾವು ಎಲ್ಲಕ್ಕಿಂತ ಹೆಚ್ಚು!

ಸೊಳ್ಳೆಯ ಜೀವನ ಚಕ್ರವೂ ತುಂಬಾ ಕುತೂಹಲಕರ. ಹೆಣ್ಣು ಸೊಳ್ಳೆ ನಿಂತ ನೀರಿನಲ್ಲಿ ಮೊಟ್ಟೆ ಇಡುತ್ತದೆ. ಒಂದು ಅಥವಾ ಎರಡು ದಿನಗಳಲ್ಲಿ ಮೊಟ್ಟೆಯಿಂದ ಲಾರ್ವಾ ಹೊರಬರುತ್ತದೆ. ಅದು ನೀರಿನಲ್ಲೇ ಬೆಳೆಯುತ್ತ ನಂತರ ಪ್ಯೂಪಾ ಹಂತವನ್ನು ತಲುಪುತ್ತದೆ. ಕೆಲವೇ ದಿನಗಳಲ್ಲಿ ಪೂರ್ಣ ಬೆಳೆದ ಸೊಳ್ಳೆಯಾಗಿ ಹಾರಿ ಹೋಗುತ್ತದೆ. ಇದೆಲ್ಲ ಆಗೋದು ಬರೀ ಒಂದು ವಾರದಲ್ಲಿ!

ಇಲ್ಲಿ ಒಂದು ಮುಖ್ಯ ವಿಷಯ ಗಮನಿಸಿ – ಸೊಳ್ಳೆಗೆ ಬೆಳೆಯಲು ನಿಂತ ನೀರು ಬೇಕೇ ಬೇಕು. ಮನೆಯ ಸುತ್ತ ಹೂ ಕುಂಡದ ತಟ್ಟೆ, ಟೈರ್, ತೆಂಗಿನ ಚಿಪ್ಪು, ಎಸಿ ಪೈಪ್ ಇವುಗಳಲ್ಲಿ ನೀರು ನಿಂತರೂ ಸೊಳ್ಳೆ ಸಂತಾನಾಭಿವೃದ್ಧಿ ಮಾಡುತ್ತದೆ. ಹಾಗಾಗಿ ಪ್ರತಿ ವಾರ ಮನೆ ಸುತ್ತ ನಿಂತ ನೀರಿದ್ದರೆ ಚೆಲ್ಲಿ ಬಿಡುವುದೇ ಡೆಂಗ್ಯೂ, ಮಲೇರಿಯಾ ತಡೆಗಟ್ಟಲು ಇರುವ ಸುಲಭ ಮಾರ್ಗ.

ಸೊಳ್ಳೆಗಳ ಬಗ್ಗೆ ಒಂದು ಸ್ವಾರಸ್ಯಕರ ವಿಚಾರ ಗೊತ್ತೆ?

ನಮ್ಮನ್ನು ಕಚ್ಚಿ ರಕ್ತ ಹೀರುವ ಸೊಳ್ಳೆಗಳು ಹೆಣ್ಣು ಸೊಳ್ಳೆಗಳು ಮಾತ್ರ! ಏಕೆಂದರೆ ಅವುಗಳಿಗೆ ಮೊಟ್ಟೆಗಳನ್ನು ಬೆಳೆಯಲು ನಮ್ಮ ರಕ್ತದಲ್ಲಿರುವ ಪ್ರೋಟೀನ್ ಅಗತ್ಯವಾಗುತ್ತದೆ. ಹಾಗಾದರೆ ಗಂಡು ಸೊಳ್ಳೆಗಳು ಏನು ಮಾಡುತ್ತವೆ? ಅವು ಮನುಷ್ಯರನ್ನು ಕಚ್ಚುವುದೇ ಇಲ್ಲ. ಬದಲಾಗಿ ಹೂಗಳ ಮಕರಂದ ಮತ್ತು ಸಸ್ಯಗಳ ಸಿಹಿ ರಸವನ್ನು ಹೀರಿಕೊಂಡು ಬದುಕುತ್ತವೆ.

### ಒಗಟು ಬಿಡುಸುವಿರಾ

ಬಾಯಿ ತುಂಬಾ ಹಲ್ಲು, ಆದ್ರೂ ಊಟ ಮಾಡಲ್ಲ. ಯಾರು ನಾನು?

## ವಿಶ್ವ, ದೇಶ, ರಾಜ್ಯ ಇಣುಕು ಸುದ್ದಿ

**ಚಂದ್ರನ ಮೇಲೆ ಮನೆ ಕಟ್ಟಲು ಇಸ್ರೋಗೆ 'ನಾಸಾ' ಆಹ್ವಾನ:** ಅಮೆರಿಕದ ಪ್ರಖ್ಯಾತ ಬಾಹ್ಯಾಕಾಶ ಸಂಸ್ಥೆ 'ನಾಸಾ' (NASA) ಚಂದ್ರನ ಮೇಲೆ ಮನುಷ್ಯರ ವಾಸಸ್ಥಾನ ನಿರ್ಮಿಸುವ ತನ್ನ 'ಮೂನ್ ಬೇಸ್' ಯೋಜನೆಗೆ ನಮ್ಮ 'ಇಸ್ರೋ'ವನ್ನು ಆಹ್ವಾನಿಸಿದೆ! ವಿಶೇಷವೆಂದರೆ, ಆಗಸ್ಟ್ 11, 2026 ರಂದು ನಮ್ಮ ಬೆಂಗಳೂರಿನಲ್ಲಿಯೇ ನಡೆದ ಸಭೆಯಲ್ಲಿ ಈ ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದು ಭಾರತದ ಬಾಹ್ಯಾಕಾಶ ವಿಜ್ಞಾನಿಗಳ ಸಾಧನೆಗೆ ಸಿಕ್ಕ ಬಹುದೊಡ್ಡ ಗೌರವ.

**ಹಾರ್ಮುಜ್ ಜಲಸಂಧಿ ಸುದ್ದಿಯಲ್ಲಿ:** ಪರ್ಷಿಯನ್ ಕೊಲ್ಲಿಯನ್ನು ಅರಬ್ಬೀ ಸಮುದ್ರಕ್ಕೆ ಸಂಪರ್ಕಿಸುವ ಹಾರ್ಮುಜ್ ಜಲಸಂಧಿ ವಿಶ್ವದ ಪ್ರಮುಖ ತೈಲ ಸಾಗಣೆ ಮಾರ್ಗವಾಗಿದೆ. ಇಲ್ಲಿ ಉಂಟಾದ ಉದ್ವಿಗ್ನತೆಯಿಂದ ಜಾಗತಿಕ ಇಂಧನ ಪೂರೈಕೆ ಮತ್ತು ತೈಲ ಬೆಲೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

**ಕಾಮನ್‌ವೆಲ್ತ್ ಕ್ರೀಡಾಕೂಟ 2026:** ಗ್ಲಾಸ್ಗೋದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತ 13 ಚಿನ್ನ, 17 ಬೆಳ್ಳಿ, 9 ಕಂಚು ಸೇರಿ ಒಟ್ಟು 39 ಪದಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದಿದೆ — ಕುಸ್ತಿ, ಶೂಟಿಂಗ್, ಹಾಕಿ, ಬ್ಯಾಡ್ಮಿಂಟನ್ ಇಲ್ಲದೆಯೂ ಈ ಸಾಧನೆ ವಿಶೇಷ!

**80ನೇ ಸ್ವಾತಂತ್ರ್ಯ ದಿನ:** ಆಗಸ್ಟ್ 15, 2026 ಭಾರತದ 80ನೇ ಸ್ವಾತಂತ್ರ್ಯ ದಿನ. ಈ ವರ್ಷದ ಧ್ಯೇಯ – ವಂದೇ ಮಾತರಂ 150 ವರ್ಷ' ಮತ್ತು 'ವಿಕಸಿತ ಭಾರತ@2047ಕ್ಕಾಗಿ ಯುವಶಕ್ತಿ'.

**ಚೆಸ್ ಜಗತ್ತಿನಲ್ಲಿ ಭಾರತದ ಮಿಂಚು:** ಭಾರತದ ಯುವ ಚೆಸ್ ಗ್ರಾಂಡ್‌ಮಾಸ್ಟರ್‌ಗಳು ವಿಶ್ವಮಟ್ಟದಲ್ಲಿ ಹೊಸ ದಾಖಲೆಗಳನ್ನು ಬರೆಯುತ್ತಿದ್ದಾರೆ. ಡಿ. ಗುಕೇಶ್, ಪ್ರಜ್ಞಾನಂದ ಅವರಂತಹ ಯುವಕರು ಘಟಾನುಘಟಿಗಳನ್ನು ಮಣಿಸಿ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಿದ್ದಾರೆ.

**ಕರ್ನಾಟಕದ HAL ಹೊಸ ಸಾಧನೆ:** ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL), ಸೇನೆ ಮತ್ತು ವಾಯುಪಡೆಗೆ ಎಲ್ಲಾ ಲಿಮಿಟೆಡ್ ಸೀರೀಸ್ ಪ್ರೊಡಕ್ಷನ್ ಲೈಟ್ ಯುಟಿಲಿಟಿ ಹೆಲಿಕಾಪ್ಟರ್‌ಗಳ (LUH) ವಿತರಣೆಯನ್ನು ಪೂರ್ಣಗೊಳಿಸಿ, ಸ್ಥಳೀಯ ಹೆಲಿಕಾಪ್ಟರ್ ಅಭಿವೃದ್ಧಿಯಲ್ಲಿ ಪ್ರಮುಖ ಮೈಲಿಗಲ್ಲು ಸಾಧಿಸಿದೆ. ಈ ಹೆಲಿಕಾಪ್ಟರ್‌ಗಳನ್ನ ತಯಾರಿಸುವ HAL ಘಟಕ ಕರ್ನಾಟಕದ ತುಮಕೂರಿನಲ್ಲಿದೆ ಎಂಬುದು ಹೆಮ್ಮೆಯ ಸಂಗತಿ!

**ಹುಣಸೆ ಬೀಜದಿಂದ ನೀರು ಶುದ್ಧೀಕರಣ** – ಭಾರತೀಯ ವಿದ್ಯಾರ್ಥಿಗಳ ಮ್ಯಾಜಿಕ್! ನೀರಿನಲ್ಲಿರುವ ಕಣ್ಣಿಗೆ ಕಾಣದ 'ಮೈಕ್ರೋಪ್ಲಾಸ್ಟಿಕ್' (ಸೂಕ್ಷ್ಮ ಪ್ಲಾಸ್ಟಿಕ್) ತ್ಯಾಜ್ಯವನ್ನು ತೆಗೆಯಲು ಮೂವರು ಭಾರತೀಯ ವಿದ್ಯಾರ್ಥಿಗಳು ನಮ್ಮೂರಿನ 'ಹುಣಸೆ ಬೀಜ'ದ ಮೂಲಕ ಅದ್ಭುತ ಪರಿಹಾರ ಕಂಡುಹಿಡಿದಿದ್ದಾರೆ! ಈ ಸಾಧನೆಗಾಗಿ ಇವರಿಗೆ 2026 ರ ಪ್ರತಿಷ್ಠಿತ ಜಾಗತಿಕ 'ಅರ್ಥ್ ಪ್ರೈಸ್' (Earth Prize) ಪ್ರಶಸ್ತಿ ಸಿಕ್ಕಿದೆ.

ಅದಮ್ಯ ಚೇತನ
BBMP ಸಮುದಾಯ ಭವನ, ಗವಿಪುರ, ಬೆಂಗಳೂರು 560019

ಅದಮ್ಯ ಚೇತನ Adamya Chetana
ಅದಮ್ಯಚೇತನದಿಂದ ಶಾಲಾ ಮಕ್ಕಳಿಗಾಗಿ ಪ್ರಕಾಶಿತ 'ಚಿಣ್ಣರ ಚೇತನ' ಗೋಡೆಪತ್ರಿಕೆ
https://adamyachetana.org/
© ಎಲ್ಲ ಹಕ್ಕುಗಳು ಅದಮ್ಯಚೇತನಕ್ಕೆ ಸೇರಿವೆ

ವಿನ್ಯಾಸ: ತ್ರಿವಿಕ್ರಮ್ ಜೋಶಿ
ಸಹಯೋಗ: ಶ್ರೀ ಪೂರ್ಣಪ್ರಜ್ಞ, ವಿಭಾಗ ಮುಖ್ಯಸ್ಥರು, ಆದರ್ಶ ಕಾಲೇಜು, ಬೆಂಗಳೂರು
ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು
ಸಂಪಾದಕರು & ಪ್ರಕಾಶಕರು: ತೇಜಸ್ವಿನಿ ಅನಂತಕುಮಾರ, ಅಧ್ಯಕ್ಷೆ, ಅದಮ್ಯ ಚೇತನ

ಸಹಯೋಗ:
ಅನಂತಕುಮಾರ ಪ್ರತಿಷ್ಠಾನ
12, ಸುಮೇರು, ಎಮ್ ಎನ್ ಕೃಷ್ಣರಾವ್ ರಸ್ತೆ,
ಬಸವನಗುಡಿ,
ಬೆಂಗಳೂರು 560004
https://akp.org.in/